**All India Radio: Bangalore**
**National Bulletin In Kannada**
**24.10.2025  1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**24.10.2025  1.10 p.m.**
**<><><><>**

ಮುಖ್ಯಾಂಶಗಳು

1. ರೋಜ್‌ಗಾರ್ ಮೇಳ ಯುವಕರ ಕನಸುಗಳನ್ನು ನನಸಾಗಿಸುವ ಮಾಧ್ಯಮ - ಪ್ರಧಾನಿ ನರೇಂದ್ರ ಮೋದಿ
2. ಮೊದಲ ಹಂತದ ಬಿಹಾರ ವಿಧಾನಸಭಾ ಚುನಾವಣೆಯ ಪ್ರಚಾರ ಬಿರುಸು - ಸಮಷ್ಟಿಪುರದಲ್ಲಿಂದು ಪ್ರಧಾನಿ ಸಾರ್ವಜನಿಕ ರ‍್ಯಾಲಿ
3. ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ಬಸ್ ಬೆಂಕಿ ದುರಂತ; ಮೃತರ ಸಂಖ್ಯೆ ೨೦ ಕ್ಕೆ ಏರಿಕೆ; ರಾಷ್ಟ್ರಪತಿ ಸೇರಿ ಗಣ್ಯರಿಂದ ಸಂತಾಪ
4. ೨೦೨೫ರ ಏಷ್ಯನ್ ಯುವ ಕ್ರೀಡಾಕೂಟ; ಭಾರತದ ಬಾಲಕ-ಬಾಲಕಿಯರ ತಂಡಗಳಿಗೆ ಚಿನ್ನದ ಪದಕ

<><><><>

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಇಂದು ನಡೆದ ರೋಜ್‌ಗಾರ್ ಮೇಳದಡಿಯಲ್ಲಿ ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಂಡ ಯುವಕರಿಗೆ ೫೧ ಸಾವಿರಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ದೇಶಾದ್ಯಂತ ४೦ ಸ್ಥಳಗಳಲ್ಲಿ ವಿತರಿಸಲಾಯಿತು. ಈ ೧೭ ನೇ ರೋಜ್‌ಗಾರ್ ಮೇಳದಲ್ಲಿ ವರ್ಚುವಲ್ ಮೂಲಕ ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಭಾಗವಹಿಸಿದರು. ಈ ಕಾರ್ಯಕ್ರಮದ ಸಂದರ್ಭದಲ್ಲಿ ಹೊಸದಾಗಿ ನೇಮಕಗೊಂಡ ಅಭ್ಯರ್ಥಿಗಳನ್ನುದ್ದೇಶಿಸಿ ವಿಡಿಯೋ ಸಂದೇಶ ನೀಡಿದ ಪ್ರಧಾನಿ ನರೇಂದ್ರ ಮೋದಿ, ಇಂದು ಉದ್ಯೋಗ ಮೇಳಗಳು ಯುವಕರ ಕನಸುಗಳನ್ನು ನನಸಾಗಿಸುವ ಮಾಧ್ಯಮಗಳಾಗಿವೆ. ಕೇವಲ ಈ ಉದ್ಯೋಗ ಮೇಳಗಳ ಮೂಲಕ ಕಳೆದ ಕೆಲವು ವರ್ಷಗಳಲ್ಲಿ ೧೧ ಲಕ್ಷಕ್ಕಿಂತ ಹೆಚ್ಚು ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ. ಇದು ಕೇವಲ ಸರ್ಕಾರಿ ಉದ್ಯೋಗಿಗಳಿಗೆ ಮಾತ್ರ ಸೀಮಿತವಾಗಿಲ್ಲ. ದೇಶದಲ್ಲಿ ಪಿಎಂ-ವಿಕಸಿತ ಭಾರತ ರೋಜಗಾರ್ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಇದರಡಿ ಮೂರುವರೆ ಕೋಟಿ ಯುವಕರಿಗೆ ಉದ್ಯೋಗಾವಕಾಶ ಒದಗಿಸುವ ಗುರಿ ಹೊಂದಲಾಗಿದೆ ಎಂದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ  (೨೬ ಸೆಕೆಂಡ್ಸ್)**

ಆಯುಷ್ ಮತ್ತು ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಖಾತೆ ರಾಜ್ಯ ಸಚಿವ ಪ್ರತಾಪ್‌ರಾವ್ ಜಾಧವ್ ಅವರು ಮಧುರೈನಲ್ಲಿ, ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ತಿರುಚಿರಾಪಳ್ಳಿಯಲ್ಲಿ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಿದರು. ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮುಖ್ಯ ಅತಿಥಿಯಾಗಿ ಭಾಗವಹಿಸಿದರು.  ಭಾರತದದ್ಯಂತ ಒಟ್ಟು ४೦ ಕಡೆಗಳಲ್ಲಿ ನಡೆಯುತ್ತಿರುವ ಉದ್ಯೋಗ ಮೇಳದಲ್ಲಿ  ಇಂದು ೫೧ ಸಾವಿರ ಹೊಸ ಉದ್ಯೋಗಸ್ಥರಿಗೆ ನೇಮಕಾತಿ ಪತ್ರಗಳನ್ನು ನೀಡಲಾಗುತ್ತಿದೆ ಎಂದರು.

**ಧ್ವನಿ : ಶೋಭಾ ಕರಂದ್ಲಾಜೆ ( ೩೨ ಸೆಕೆಂಡ್ಸ್)**

<><><><>

ಮೊದಲ ಹಂತದ ಬಿಹಾರ ವಿಧಾನಸಭಾ ಚುನಾವಣೆಯ ಪ್ರಚಾರ ಬಿರುಸುಗೊಂಡಿದೆ. ಎನ್‌ಡಿಎ ತಾರಾ ಪ್ರಚಾರಕರು ತಮ್ಮ ಅಭ್ಯರ್ಥಿಗಳನ್ನು ಬೆಂಬಲಿಸಿ ರಾಜ್ಯಾದ್ಯಂತ ರ‍್ಯಾಲಿಗಳನ್ನು ನಡೆಸುತ್ತಿದ್ದಾರೆ. ಹಿರಿಯ ಬಿಜೆಪಿ ನಾಯಕ ಮತ್ತು ಪ್ರಧಾನಿ ನರೇಂದ್ರ ಮೋದಿ ಇಂದು ಸಮಷ್ಟಿಪುರ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡರು. ಬಳಿಕ ಪ್ರಧಾನಿ, ಇಂದು ಮಧ್ಯಾಹ್ನ ಬೇಗುಸರೈನಲ್ಲಿ ನಡೆಯುವ ಸಾರ್ವಜನಿಕ ರ‍್ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇದಕ್ಕೂ ಮುನ್ನ ಅವರು, ಬಿಹಾರದ ಸಮಸ್ತಿಪುರದಲ್ಲಿ ಭಾರತ ರತ್ನ ಪುರಸ್ಕೃತ ಕರ್ಪೂರಿ ಠಾಕುರ್ ಅವರಿಗೆ ಗೌರವ ನಮನ ಸಲ್ಲಿಸಿದರು. ಐಎನ್‌ಡಿಐ ಮೈತ್ರಿಕೂಟ ಮುಖ್ಯಮಂತ್ರಿ ಅಭ್ಯರ್ಥಿ ಮತ್ತು ಆರ್‌ಜೆಡಿ ನಾಯಕ ತೇಜಸ್ವಿ ಪ್ರಸಾದ್ ಯಾದವ್ ಕೂಡ ಇಂದಿನಿಂದ ಚುನಾವಣಾ ಪ್ರಚಾರವನ್ನು ಪ್ರಾರಂಭಿಸಲಿದ್ದಾರೆ.

<><><><>

ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ಸಂಭವಿಸಿದ ಬಸ್ ಬೆಂಕಿ ದುರಂತದಲ್ಲಿ ಸಾವನ್ನಪ್ಪಿದವರ ಸಂಖ್ಯೆ ೨೦ ಕ್ಕೇರಿದೆ. ೨೧ ಪ್ರಯಾಣಿಕರು ತುರ್ತು ಬಾಗಿಲಿನ ಮೂಲಕ ಪ್ರಾಣಾಪಾಯದಿಂದ ಪರಾರಿಯಾಗಿದ್ದಾರೆ. ಬಸ್‌ನಲ್ಲಿ ಇಬ್ಬರು ಚಾಲಕರು ಸೇರಿದಂತೆ ೪೩ ಮಂದಿ ಪ್ರಯಾಣಿಸುತ್ತಿದ್ದರು. ಮೃತರು ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಉತ್ತರಪ್ರದೇಶ, ಒಡಿಶಾ ರಾಜ್ಯಕ್ಕೆ ಸೇರಿದವರಾಗಿದ್ದಾರೆ. ಘಟನೆ ಕುರಿತು ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಸಂತಾಪ ವ್ಯಕ್ತಪಡಿಸಿದ್ದಾರೆ. ಸಂತ್ರಸ್ತ ಕುಟುಂಬಗಳಿಗೆ ಸಂತಾಪ ಸೂಚಿಸಿರುವ ಅವರು, ಗಾಯಾಳುಗಳ ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸಿದ್ದಾರೆ.

<><><><>

ಇಂಡೋ - ಟಿಬೇಟಿಯನ್ ಗಡಿ ಪೊಲೀಸ್ ಐಟಿಬಿಪಿಯ ಸಂಸ್ಥಾಪನಾ ದಿನವಾದ ಇಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಇಂಡೋ-ಟಿಬೆಟಿಯನ್ ಗಡಿ ಪೊಲೀಸ್ ಪಡೆಯ ಧೈರ್ಯಶಾಲಿ ವೀರರನ್ನು ಶ್ಲಾಘಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಐಟಿಬಿಪಿ ಪಡೆ ಹಿಮಾಲಯದ ಗಡಿಗಳಲ್ಲಿ ರಕ್ಷಣೆಯ ಮೊದಲ ಸಾಲಾಗಿ ನಿಂತಿದೆ. ಐಟಿಬಿಪಿ ಸ್ಥಾಪನೆಯಾದಾಗಿನಿಂದ, ಭಾರತದ ಗಡಿಗಳು ಮತ್ತು ಜನರನ್ನು ರಕ್ಷಿಸಲು ಧೈರ್ಯ, ಶಿಸ್ತು ಮತ್ತು ಅಚಲ ಬದ್ಧತೆಯನ್ನು ಈ ಪಡೆ ಪ್ರದರ್ಶಿಸಿದೆ ಎಂದು ಉಪರಾಷ್ಟ್ರಪತಿಗಳು ಹೇಳಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಐಟಿಬಿಪಿ ಪೊಲೀಸ್ ಪಡೆಯ ಸಿಬ್ಬಂದಿಗೆ ಶುಭಾಶಯ ಕೋರಿರುವ ಕೇಂದ್ರ ಸಚಿವ ಅಮಿತ್ ಶಾ, ಕಠಿಣ ಭೂಪ್ರದೇಶಗಳು ಮತ್ತು ವಿಪರೀತ ಹವಾಮಾನದಲ್ಲಿ ರಾಷ್ಟ್ರವನ್ನು ಸುರಕ್ಷಿತಗೊಳಿಸುವಲ್ಲಿ ಸಿಬ್ಬಂದಿಯ ಧೈರ್ಯ ಮತ್ತು ಬದ್ಧತೆಯನ್ನು ಶ್ಲಾಘಿಸಿದರು. ಇದೇ ವೇಳೆ ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ಹುತಾತ್ಮರಿಗೆ ಅವರು ಗೌರವ ನಮನ ಸಲ್ಲಿಸಿದರು.

<><><><>

ಕರಾವಳಿ ಕರ್ನಾಟಕ, ಕೇರಳ, ಮಾಹೆ, ಅಂಡಮಾನ್, ನಿಕೋಬಾರ್ ದ್ವೀಪಗಳಲ್ಲಿ ಇಂದು ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಭಾರಿ ಮಳೆ ಹಿನ್ನಲೆ ಆರೆಂಜ್

ಆಲರ್ಟ್ ಘೋಷಿಸಲಾಗಿದ್ದು. ಆಂಧ್ರಪ್ರದೇಶ, ಕೊಂಕಣ, ಗೋವಾ, ಮಧ್ಯ ಮಹಾರಾಷ್ಟ್ರ, ತಮಿಳುನಾಡು, ಪುದುಚೇರಿ, ಕಾರೈಕಲ್ ಮತ್ತು ತೆಲಂಗಾಣದ ಕೆಲವು ಭಾಗಗಳಲ್ಲಿ ನಾಳೆಯವರೆಗೆ ಸಾಧಾರಣದಿಂದ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಮುಂದಿನ ಎರಡು ಮೂರು ದಿನಗಳಲ್ಲಿ ಒಡಿಶಾ ಮತ್ತು ಕರ್ನಾಟಕದ ಪ್ರತ್ಯೇಕ ಸ್ಥಳಗಳಲ್ಲಿ ಮಿಂಚು ಮತ್ತು ಬಿರುಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><><>

ಭಾರತವು ಯಾವಾಗಲೂ ವಿಶ್ವಸಂಸ್ಥೆ ಮತ್ತು ಬಹುಪಕ್ಷೀಯತೆಗೆ ಬಲವಾದ ಪ್ರತಿಪಾದಕನಾಗಿ ಮುಂದುವರಿಯುತ್ತದೆ ಎಂದು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಹೇಳಿದ್ದಾರೆ. ವಿಶ್ವಸಂಸ್ಥೆಯ ೮೦ ವರ್ಷಗಳ ಸ್ಮರಣಾರ್ಥ ನವದೆಹಲಿಯಲ್ಲಿ ನಡೆದ ಸಂಸ್ಮರಣಾ ಅಂಚೆ ಚೀಟಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಸಚಿವರು, ಶಾಂತಿ ಮತ್ತು ಭದ್ರತೆ ಹಾಗೂ ಅಭಿವೃದ್ಧಿ ಮತ್ತು ಪ್ರಗತಿಯ ಆದರ್ಶಗಳಿಗೆ ಭಾರತದ ಬದ್ಧತೆಯನ್ನು ಪುನರುಚ್ಚರಿಸಿದರು.

<><><>

ನಾಮನಿರ್ದೇಶನಕ್ಕೆ ಅವಕಾಶ ಕಲ್ಪಿಸುವ ಬ್ಯಾಂಕಿಂಗ್ ನಿಯಮಗಳ ತಿದ್ದುಪಡಿ ಕಾಯ್ದೆ ಬರುವ ತಿಂಗಳ ೧ ರಂದು ಜಾರಿಗೆ ಬರಲಿದೆ. ಠೇವಣಿ ಇಡುವ ವ್ಯಕ್ತಿ, ಆದ್ಯತೆ ಮೇಲೆ ನಾಲ್ಕು ಜನರನ್ನು ನಾಮ ನಿರ್ದೇಶಿಸುವ, ಠೇವಣಿದಾರರು ಮತ್ತು ಅವರ ನಾಮ ನಿರ್ದೇಶಿತರು ಕ್ಲೈಮ್‌ಗಳನ್ನು ಸುಲಭವಾಗಿ ಪಡೆಯಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

<><><>

ಉದಯೋನ್ಮುಖ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತಾ ಸಮಾವೇಶ ಎಸ್ಟಿಕ್ ೨೦೨೫ ಅನ್ನು ನವೆಂಬರ್ ೩ ರಿಂದ ೫ ರವರೆಗೆ ನವದೆಹಲಿಯ ಭಾರತ್ ಮಂಟಪದಲ್ಲಿ ಆಯೋಜಿಸಲಾಗಿದೆ. ಈ ನಿಟ್ಟಿನಲ್ಲಿ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ನವದೆಹಲಿಯಲ್ಲಿ ಪೂರ್ವಭಾವಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ನಿನ್ನೆ ನಡೆದ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಸಚಿವಾಲಯದ ಕಾರ್ಯದರ್ಶಿ ಎಸ್ ಕೃಷ್ಣನ್, ಭಾರತ ಸಾಮಾಜಿಕ ಒಳಿತಿಗಾಗಿ ಕೃತಕ ಬುದ್ಧಿಮತ್ತೆಯನ್ನು ಒಂದು ಶಕ್ತಿಯಾಗಿ ಬಳಸಿಕೊಳ್ಳಬೇಕು. ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕಾದರೆ, ತಂತ್ರಜ್ಞಾನದ ಅಲೆಗೆ ಅನುಗುಣವಾಗಿ ಮುನ್ನಡೆಯಬೇಕು ಮತ್ತು ಎಐ ಈ ಪರಿವರ್ತನೆಗೆ ಚಾಲನೆ ನೀಡುವ ಅತ್ಯಂತ ನಿರ್ಣಾಯಕ ತಂತ್ರಜ್ಞಾನವಾಗಿದೆ ಎಂದು ತಿಳಿಸಿದರು. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಈ ಸಮಾವೇಶವನ್ನು ಆಯೋಜಿಸುತ್ತಿದೆ, ಇದು ಭಾರತದ ನಾವೀನ್ಯತೆ-ನೇತೃತ್ವದ ಬೆಳವಣಿಗೆಯನ್ನು ರೂಪಿಸುವ ಮತ್ತು ವಿಕಸಿತ ಭಾರತ ೨೦೪೭ ರ ದೃಷ್ಟಿಕೋನವನ್ನು ಮುಂದಕ್ಕೆ ಸಾಗಿಸುವ ಅತ್ಯಾಧುನಿಕ ಬೆಳವಣಿಗೆಗಳನ್ನು ಪ್ರದರ್ಶಿಸುತ್ತದೆ.

<><><>

ಬಹ್ರೇನ್‌ನಲ್ಲಿ ನಡೆದ ೨೦೨೫ರ ಏಷ್ಯನ್ ಯುವ ಕ್ರೀಡಾಕೂಟದ ಕಬ್ಬಡ್ಡಿ ಪಂದ್ಯಾವಳಿಯಲ್ಲಿ, ಭಾರತದ ಬಾಲಕ ಮತ್ತು ಬಾಲಕಿಯರ ಎರಡು ತಂಡಗಳು ಗೆಲುವು ಸಾಧಿಸುವ ಮುಖೇನ ಚಿನ್ನದ ಪದಕವನ್ನು

ಮುಡಿಗೇರಿಸಿಕೊಂಡಿವೆ. ಬಾಲಕಿಯರ ತಂಡವು ಫೈನಲ್‌ನಲ್ಲಿ ಇರಾನ್ ಅನ್ನು ೭೫-೧೦ ಅಂಕಗಳಿಂದ ಸೋಲಿಸಿತು, ರೈಡರ್ ನೇಹಾ ಪಟೇಲ್ ೧೮ ಅಂಕಗಳೊಂದಿಗೆ ಮಿಂಚಿದರೆ, ಡಿಫೆಂಡರ್ ರಿಯಾ ಸಿಂಗ್ ಅವರ ಉತ್ತಮ ಪ್ರದರ್ಶನದೊಂದಿಗೆ ಭಾರತ ಗೆಲುವು ದಾಖಲಿಸಿತು. ಬಾಲಕರ ತಂಡ ಫೈನಲ್‌ನಲ್ಲಿ ಇರಾನ್ ವಿರುದ್ಧ ೩೫-೩೧ ಅಂಕಗಳ ಅಂತರದಲ್ಲಿ ಜಯ ಸಾಧಿಸಿತು. ಎರಡೂ ತಂಡಗಳು ಪಂದ್ಯದುದ್ದಕ್ಕೂ ರೋಚಕ ಪ್ರದರ್ಶನ ನೀಡಿದವು ಆದರೆ, ಪಂದ್ಯದ ಕೊನೆಯ ನಿಮಿಷಗಳಲ್ಲಿ ಚಿನ್ನ ಗೆಲ್ಲುವಲ್ಲಿ ಭಾರತ ಸಫಲವಾಯಿತು, ಈ ಸಾಧನೆಯು ಏಷ್ಯಾದ ಯುವ ಕಬಡ್ಡಿ ಶಕ್ತಿ ಕೇಂದ್ರವಾಗಿ ಭಾರತದ ಸ್ಥಾನವನ್ನು ಬಲಪಡಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>